**ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ**

ದಿನಾಂಕ : 15-08-2018

# ವರದಿ

## ಸ್ವಾತಂತ್ರ್ಯ ಅರ್ಹತೆ ಹೊರತು ಹಕ್ಕಲ್ಲ -ಶ್ರೀ ಜೋಸೆಫ್ ಅಲೆಗ್ಸಾಂಡರ್

### ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 72ನೆಯ ಸ್ವಾತಂತ್ರ್ಯ ದಿನಾಚರಣೆ

ಕೊಳ್ಳೇಗಾಲ : 15 ಆಗಸ್ಟ್ : ಸ್ವಾತಂತ್ರ್ಯ ಎಂಬುದು ಅರ್ಹತೆಯೇ ಹೊರತು ಹಕ್ಕಲ್ಲ. ಸ್ವಾತಂತ್ರ್ಯ ಬೇರೆ ; ಸ್ವಚ್ಛಂದ ಬೇರೆ ಸ್ವಾತಂತ್ರ್ಯ ಸ್ವೇಚಾಚಾರವಲ್ಲ ಎಂದು ಎಸ್‌ವಿಕೆ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಜೋಸೆಫ್ ಅಲೆಗ್ಸಾಂಡರ್ ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 72ನೆಯ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಮಾತನಾಡಿದರು.

ಸ್ವಾತಂತ್ರ್ಯವು ಸದಾ ಸತ್ಯವನ್ನು ಎತ್ತಿ ಹಿಡಿಯುವಂತಿರಬೇಕು. ವಿವೇಚನೆ ಹಾಗೂ ವಿವೇಕಪ್ರಜ್ಞೆ ಇಲ್ಲದಾಗ ಸ್ವಾತಂತ್ರ್ಯವು ಮಾನವನ ಹಾಗೂ ಸಮಾಜದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿದೆ ಎಂಬ ಸತ್ಯವನ್ನು ಪ್ರತಿಯೊಬ್ಬ ಪ್ರಜೆಗೂ ಶಿಕ್ಷಣದ ಮೂಲಕ ತಿಳಿಸುವ ಕೆಲಸವಾಗಬೇಕಿದೆ.

ಸ್ವಾಮಿ ವಿವೇಕಾನಂದರ ವಾಣಿಯಂತೆ ಯಾವುದೇ ರಾಷ್ಟ್ರದಲ್ಲಿ ಮೊದಲು ಸಮರ್ಥ ವ್ಯಕ್ತಿಗಳ ನಿರ್ಮಾಣವಾಗಬೇಕು ತದನಂತರ ಸ್ವಾತಂತ್ರ್ಯವು ತಾನಾಗಿಯೇ ಸಿಗುತ್ತದೆ. ರಾಷ್ಟ್ರ ನಿರ್ಮಾಣವೆಂದರೆ ವ್ಯಕ್ತಿತ್ವ ನಿರ್ಮಾಣ ಹಾಗೂ ಚಾರಿತ್ರ್ಯ ನಿರ್ಮಾಣ ಎಂಬುದು ವಿವೇಕಾನಂದರ ಬಲವಾದ ನಂಬಿಕೆಯಾಗಿತ್ತು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಲಕ್ಷಾಂತರ ಜನರ ತ್ಯಾಗ ಬಲಿದಾನಗಳ ಫಲವಾಗಿ ನಮ್ಮದಿಂದು ಸ್ವತಂತ್ರ ಭಾರತ. ಸ್ವಾತಂತ್ರ್ಯ ಗಳಿಸಿ 71 ವರ್ಷಗಳಾದರೂ ಸಶಕ್ತ ಭಾರತ ನಿರ್ಮಾಣ ಇನ್ನೂ ಆಗಬೇಕಿದೆ. ಮಹಾತ್ಮ ಗಾಂಧೀಜಿಯವರ ಆಶಯದಂತೆ ಸಂವಿಧಾನ ನೀಡಿರುವ ಹಕ್ಕುಗಳಿಗಿಂತ ಕರ್ತವ್ಯಗಳ ಸಮರ್ಪಕ ಹಾಗೂ ಯೋಗ್ಯ ನಿರ್ವಹಣೆಯಾಗಬೇಕಿದೆ. ತಂದೆ ಹೃದಯದ ಗಾಂಧೀಜಿ ಹಾಗೂ ತಾಯಿ ಹೃದಯದ ಬಾಬಾ ಸಾಹೇಬ್ ಅಂಬೇಡ್ಕರ್ ಅವರುಗಳಿಂದ ಸಹಿಷ್ಣತೆ ಎಂಬ ವರವನ್ನು ಪಡೆದ ದೇಶ ಇದು. ವಿದ್ಯೆಯೇ ನಿಜವಾದ ಸ್ವಾತಂತ್ರ್ಯ ಆತ್ಮಗೌರವದ ಚೌಕಟ್ಟಿನಲ್ಲಿ ಎಲ್ಲರೂ ಸ್ವಾತಂತ್ರ್ಯವನ್ನು ಅನುಭವಿಸುವಂತಾದಲ್ಲಿ ನಿಜವಾದ ಪ್ರಜಾಪ್ರಭುತ್ವವು ಮೈದಳೆದಂತಾಗುತ್ತದೆ ತನ್ಮೂಲಕ ರಾಷ್ಟ್ರ ಭಕ್ತಿ ಎಂಬುದು ಸಾಮೂಹಿಕ ಹೊಣೆಗಾರಿಕೆಯನ್ನು ಹೆಚ್ಚಿಸುತ್ತದೆ ಎಂದು ಕರೆ ನೀಡಿದರು.

ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಎನ್ ಮಹದೇವಸ್ವಾಮಿ, ಶುಶ್ರೂಷೆ ಶಾಲೆ ಪ್ರಾಚಾರ್ಯ ಶ್ರೀ ವಿಷಕಂಠಮೂರ್ತಿ, ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಸಂಚಾಲಕರಾದ ಪ್ರೊ. ಕೆ ಆರ್ ಗುರುಪ್ರಸಾದ್ ಹಾಗೂ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಅನುಪಮ ಸ್ವಾಗತಿಸಿ, ಕು. ಅಂಜನ ವಂದಿಸಿದರು. ಕು. ಶೀಲಾ ಪ್ರಥಮ ಬಿ.ಎ, ಕು. ಪವಿತ್ರ, ಪ್ರಥಮ ಬಿ.ಎ ಕು. ಯಶಸ್ವಿನಿ, ತೃತೀಯ ಶುಸ್ರೂಷ ಸ್ವಾತಂತ್ರ್ಯ ದಿನಾಚರಣೆ ಕುರಿತು ಮಾತನಾಡಿದರು.

72ನೆಯ ಸ್ವಾತಂತ್ರ್ಯ ದಿನಾಚರಣೆ ಶ್ರೀ ಜೋಸೆಫ್ ಅಲೆಗ್ಸಾಂಡರ್‌ರವರಿಂದ ಧ್ವಜಾರೋಹಣ.



72ನೆಯ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಶ್ರೀ ಜೋಸೆಫ್ ಅಲೆಗ್ಸಾಂಡರ್‌ರವರು ಸ್ವಾತಂತ್ರ್ಯ ದಿನಾಚರಣೆ ಕುರಿತು ಸಂದೇಶ ನೀಡುತ್ತಿರುವುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಅಧ್ಯಾಪಕ, ಅಧ್ಯಾಪಕೇತರ ಹಾಗೂ ವಿದ್ಯಾರ್ಥಿನಿಯರುಗಳು

